ಜೀವನೋತ್ಸಾಹದ ಚಿಲುಮೆ


ವಸಂತ

ತುಷಾರ ಮೇ 2001





● ಚಿತ್ರ ಲೇಖನ:
ಎನ್. ಸಿ. ದೇಸಾಯಿ



ಜೀವನೋತ್ಸಾಹದ ಋತು

ವಸಂತ







ಕಲಾವಿದರು, ಕವಿಗಳು, ಬರೆಹಗಾರರು, ಸಂಗೀತಗಾರರೆಲ್ಲರಿಗೂ ಉತ್ಸಾಹ, ಹುಮ್ಮಸ್ಸು ನೀಡುವ ಕಾಲ 'ವಸಂತ'. ಹೋಳಿಯ ಹಬ್ಬದೊಂದಿಗೆ ಕೊನೆಯಾಗುವ ಶಿಶಿರ ಋತು ವಸಂತದ ಆಗಮನಕ್ಕೆ ನಾಂದಿ ಹಾಡುತ್ತದೆ. ಆದರೂ ವಸಂತದ ಉಲ್ಲೇಖಕ್ಕೆ ಶಿಶಿರದ ಕೊನೆಕಾಲದ ಕೊಡುಗೆಯೂ ಅಷ್ಟೇ ಆಕರ್ಷಕ ಅಷ್ಟೇ ವರ್ಣರಂಜಿತ.

ನಮ್ಮ ದೇಶದ ಮೇಲಿನ ನೆತ್ತಿಯಿಂದ ಕೆಳಗಿನ ಪಾದದವರೆಗೂ ಆಚರಿಸುವ ಹಬ್ಬ 'ಹೋಳಿ'. ಪ್ರದೇಶ ಬದಲಾದಂತೆ ಭಾಷೆ, ಬೇರೆಯಾದಂತೆ ಜನತೆಯ ಸಂಸ್ಕೃತಿ-ಸಂಸ್ಕಾರಗಳು ಬೇರೆಯಾದಂತೆ ಈ ಹಬ್ಬದ ಆಚರಣೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಾದರೂ ಮೂಲ ಪೌರಾಣಿಕ ಹಿನ್ನೆಲೆ ಮಾತ್ರ ಒಂದೇ.

ಇದು ಐದುದಿನಗಳ ಕಾಲ ನಡೆಯುವ ಹಬ್ಬ. 'ರಂಗಪಂಚಮಿ' ಎಂದೇ ನಾವಿದನ್ನು ಕರೆಯುತ್ತೇವೆ. ಇನ್ನು ಕೆಲಪ್ರದೇಶಗಳಲ್ಲಿ ಏಳು, ಒಂಬತ್ತು, ಐವತ್ತು ದಿನಗಳು ನಡೆಯುವದೂ

ಉಂಟು. ಅಷ್ಟು ದೊಡ್ಡದಾಗಿ ನಡೆಯುವದು ಹೆಚ್ಚಾಗಿ ಉತ್ತರಭಾರತದಲ್ಲಿ ಮಾತ್ರ ಕಂಡು ಬರುತ್ತದೆ.

ಈ ಹಬ್ಬದ ಮೂಲ ಮೂರ್ತಿಯೇ 'ಮನ್ಮಥ' – ಕಾಮ, ಅವನ ಪತ್ನಿ ರತಿದೇವಿ, ಅವರ ಶೃಂಗಾರಲೀಲೆ, ಕಾಮಕೇಳಿ ಜನತೆಗೊಂದು ಆದರ್ಶ, ಹಬ್ಬವನ್ನಾಚರಿಸುವ ಮೂಲ ಬೇರು.

ನಮ್ಮಲ್ಲಿ, ನೆರೆಯ ರಾಜ್ಯಗಳಲ್ಲಿ, ಉತ್ತರ ಭಾರತದಲ್ಲಿ ವಸಂತ ಋತುವಿನಲ್ಲಿ ಆಚರಿಸುವ ಹಬ್ಬಗಳು ಜೀವನೋತ್ಸಾಹದ ಪ್ರತೀಕಗಳು.

ಶಿವನ ತಪೋಭಂಗ

ತನ್ನ ತಪೋಭಂಗಕ್ಕೆ ಮನ್ಮಥನೇ ಕಾರಣನೆಂದು ಶಿವ ತನ್ನ ಮೂರನೇ ಕಣ್ಣನ್ನು ತೆರೆಯುತ್ತಾನೆ. ಆ ನೇತ್ರದಿಂದ ಬಂದ ಕಿರಣ ಸೋಂಕಿದ ಮಾತ್ರಕ್ಕೆ ಮನ್ಮಥ ಸುಟ್ಟು ಬೂದಿಯಾಗುತ್ತಾನೆ.

ಇದು ನಡೆದುದು ರತಿಯ ಸಮ್ಮುಖದಲ್ಲಿ– ಯಾವಾಗಲೂ ಕಾಮನ ತೋಳಸೆರೆಯಲ್ಲಿಯೇ ಇರುವ ರತಿಯ ಪಾಡೇನಾಗಿರಬೇಡ ! ಎವೆಮುಚ್ಚಿ ತೆರೆಯುವುದರಲ್ಲಿ ಪತಿಯ ಪ್ರಾಣ ಹಾರಿಹೋಗಿತ್ತು. ದುಃಖಿತ ರತಿ, ನನ್ನ ಪತಿಯನ್ನು ನನಗೆ ನೀಡೆಂದು ಶಿವನನ್ನೇ ಬೇಡಿದಳು. ಈ ಪ್ರಸಂಗಕ್ಕೆ ಕಾರಣರಾದ ದೇವತೆಗಳು ಕೂಡ ರತಿಯೊಂದಿಗೆ ದನಿಗೂಡಿಸಿದರು. ಶಿವನ ಮನಸ್ಸು ಕರಗಿತು. ಮನ್ಮಥನಿಗೆ ಪ್ರಾಣ ಮರಳಿತು.

ಇನ್ನೊಂದು ಹೇಳಿಕೆಯ ಪ್ರಕಾರ ಕಾಮನು ಬ್ರಹ್ಮನ ಮಗ. ಬ್ರಹ್ಮ ಮಗನಿಗೆ ಲೋಕವನ್ನೇ ಮೋಹಿಸುವ ಶಕ್ತಿಯನ್ನು ಅನುಗ್ರಹಿಸಿದ, ಕಾಮ ಈ ಪ್ರಯೋಗವನ್ನು ತಂದೆಯ ಮೇಲೆ ಪ್ರಯೋಗಿಸಿದ ! ಬ್ರಹ್ಮನಲ್ಲಿ ಇದರಿಂದಾಗಿ ಚಾಂಚಲ್ಯ ಉಂಟಾಯಿತು. ಮಗಳು ಸಂಧ್ಯಾಳನ್ನೆ ಮೋಹಿಸುವ ಮಾಯಾಜಾಲ ಬ್ರಹ್ಮನದಾಯಿತು. ಮಗನ ಗುಟ್ಟು ಬ್ರಹ್ಮನಿಗೆ ತಿಳಿದಾಗ ಕುಪಿತನಾದ. ಬ್ರಹ್ಮ ಮಗನು ಶಿವನಿಂದಲೇ ಭಸ್ಮವಾಗಲಿ ಎಂದು ಶಾಪವನ್ನು ನೀಡಿದನು...! ಶಿವನ ಮೂರನೇ ಕಣ್ಣಿನ ಜ್ವಾಲೆಯಿಂದ ಭಸ್ಮನಾದ ಕಾಮನನ್ನು ಕ್ಷಮಿಸಿ, ಜೀವದಾನ ಮಾಡಲು ಇತರೇ ದೇವದೇವತೆಗಳ ಪ್ರಾರ್ಥಿಸಿದಾಗ ಶಿವ, ಕಾಮ ಅನಂಗನಾಗಿ ನೆನೆದವರ ಮನದಲ್ಲಿ ಹುಟ್ಟಲಿ ಎಂಬ ವರ ನೀಡಿದನು. ಆನಂತರ ಕಾಮ, ಶ್ರೀಕೃಷ್ಣ ರುಕ್ಮಿಣಿಯರ ಮಗನಾಗಿ 'ಪ್ರದ್ಯುಮ್ನ' ಎಂಬ ಹೆಸರಿನಿಂದ ಹುಟ್ಟುತ್ತಾನೆ...!

ಕಾಮ ಮುಕ್ಕಣ್ಣನ ಮೂರನೇಯ ಕಣ್ಣಿನ ಕಿರಣಕ್ಕೇ ಭಸ್ಮವಾದುದು ಫಾಲ್ಗುಣದ ಹುಣ್ಣಿಮೆಯಂದು. ಹೀಗಾಗಿ ಅಂದು ದುಷ್ಟಕಾಮನೆಗಳನ್ನು ಕಾಮನ ರೂಪದಲ್ಲಿ ದಹಿಸಲಾಗುತ್ತಿದೆ ಅದೇ ಕಾಮದಹನ.

''ಹೋಳಿ'' ಈ ಶಬ್ದ ರೂಢಿಯಲ್ಲಿ, ಬಣ್ಣದ ಹಬ್ಬ , ಓಕಳೀ ಆಟ. ಕಾಮದಹನದ ಪ್ರತೀಕವೆಂದು ಪ್ರಚಲಿತವಾಗಿದೆ, ಆದರೆ ಇದಕ್ಕೂ ಒಂದು ಪೌರಾಣಿಕ ಸಂದರ್ಭವನ್ನೇ ಹೆಣೆಯಲಾಗುತ್ತದೆ.

ಪ್ರಹ್ಲಾದನು ವಿಷ್ಣುಭಕ್ತಿಯ ಹಟವನ್ನು ಬಿಡದಾದಾಗ ಹಿರಣ್ಯಕಶ್ಯಪುವು ತನ್ನ ತಂಗಿ ''ಹೋಳಿಕಾ''ಳ ಸಹಾಯ ಪಡೆಯಲು ಪ್ರಯತ್ನಿಸುತ್ತಾನೆ, ಹೋಳಿಕಾ ಎಂದಿಗೂ ಜ್ವಾಲೆಗೆ



ಬಣ್ಣದಾಟದಲ್ಲಿ ಮುಳುಗಿರುವ ಹೊಸಪೀಳಿಗೆ

ತುತ್ತಾಗದಂಥ ವರ ಪಡೆದಿರುತ್ತಾಳೆ. ಪ್ರಹ್ಲಾದನನ್ನು ಅವಳ ತೊಡೆಯ ಮೇಲೆ ಕುಳ್ಳಿರಿಸಿ ಹೋಳಿಕಾಗೆ ಬೆಂಕಿ ನೀಡುತ್ತಾರೆ, ಅಂದರೆ ಪ್ರಹ್ಲಾದ ಮಾತ್ರ ಬೆಂಕಿಗೆ ಆಹುತಿಯಾಗುತ್ತಾನೆ. ಹೋಳಿಕಾ ಹಾಗೆ ಉಳಿಯುತ್ತಾಳೆಂಬುದು ಅವರ ಊಹೆ. ಆದರೆ ಅದು ತದ್ವಿರುದ್ಧವಾಗುತ್ತದೆ! ಹೋಳಿಕಾಳೆ ಜ್ವಾಲೆಗೆ ಆಹುತಿಯಾಗುತ್ತಾಳೆ, ಇದು ಕೂಡ ನಡೆದುದು ಫಾಲ್ಗುಣದ ಹುಣ್ಣಿಮೆಯಂದೇ. ಈ ಸಂದರ್ಭ

ಮಣಿಪುರದಲ್ಲಿ 'ಯಾಸುಂಗ'



ಕಾಮನ ಹಬ್ಬಕ್ಕೆ 'ಹೋಳಿ' ಶಬ್ದ ಬರಲು ಕಾರಣವಾಗಿರಲೂ ಬಹುದು.

ಪೌರಾಣಿಕ ಕಥೆಗಳು ಏನೇ ಇರಲಿ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ಈ ಹಬ್ಬ ವಾಸ್ತವಿಕ ಜೀವನದಲ್ಲಿ ಸಾಮಾಜಿಕ ನಡತೆಯಲ್ಲಿ ಹಳ್ಳಿಯ ಜಾನಪದರಿಗೂ ಶಹರದ ವಿದ್ಯಾವಂತರಿಗೂ ಸಂತೋಷದಿಂದ ಆನಂದದಿಂದ ಆಚರಿಸುವ ಹಬ್ಬವಾಗಿ ಪರಿಣಮಿಸಿದೆ ಮಾತ್ರ ಎಂಬುದು ದಿಟ!

ಉತ್ತರ ಭಾರತದಲ್ಲಿ ಈ ಹಬ್ಬಕ್ಕೆ ಇನ್ನೂ ಹೆಚ್ಚಿನ ಮೆರಗು!

ಬ್ರಜದಲ್ಲಿ ಹೋಳಿ

ಇಲ್ಲಿ ಈ ಹಬ್ಬ ವರ್ಣದಾಟ, ಧಾರ್ಮಿಕ ಹಿನ್ನೆಲೆ ಇವುಗಳೊಂದಿಗೆ ನಡೆದಷ್ಟು ಕಾಲ ಇನ್ನಾವ ಪ್ರದೇಶದಲ್ಲೂ ನಡೆಯುವದಿಲ್ಲ. ಈ ಹಬ್ಬ ಹೋಳಿಹಬ್ಬದ ರಂಗ ಪಂಚಮಿಯಿಂದ ಪ್ರಾರಂಭವಾಗಿ, ಚೈತ್ರ ಕೃಷ್ಣ ದಶಮಿಯವರೆಗೆ ಪೂರ್ಣ ಐವತ್ತು ದಿನಗಳ ಕಾಲ ನಡೆಯುತ್ತದೆ ಈ ರಂಗಿನ ಹಬ್ಬ ಬ್ರಜದ ಕೃಷ್ಣನ ಮಂದಿರದಲ್ಲಿ. ನಿತ್ಯ ಗುಲಾಲನ್ನೇ ಮುಖ್ಯವಾಗಿಟ್ಟುಕೊಂಡು,

ಅಲಂಕಾರ ದಿನವೂ ಭಿನ್ನವಾಗಿರುತ್ತದೆ, ಭಕ್ತರಿಗೆ ಗುಲಾಲನ್ನೇ ಪ್ರಸಾದರೂಪದಲ್ಲಿ ಎರೆಚುತ್ತಾರೆ.

ಹಬ್ಬ ಈ ಮೊದಲೇ ಪ್ರಾರಂಭವಾಗಿದ್ದರೂ ವಿಧಿವತ್ತಾಗಿ ಫಾಲ್ಗುಣ ಕೃಷ್ಣ ಏಕಾದಶಿಯಂದು ಮಥುರಾ - ಮಾಂಟ ಮಾರ್ಗದಲ್ಲಿ ಹದಿನೆಂಟು ಕಿ.ಮಿ. ಅಂತರದಲ್ಲಿರುವ "ಮಾನಸ ಸರೋವರ" ಗ್ರಾಮದಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ 'ರಾಧೆ'ಯ ಭವ್ಯಮಂದಿರವಿದೆಯಲ್ಲದೆ ಈ ಸಂದರ್ಭದಲ್ಲಿ ಈ ದೇವಿಯ ಜಾತ್ರೆಯೂ ಆಗುತ್ತದೆ. ಭಗವಾನ ಕೃಷ್ಣನು ರಾಧೆಯೊಡನೆ ರಾಸಕ್ರೀಡೆಯಾಡಿದ ಸ್ಥಳವು ಕೂಡ ಇದುವೆ ! ಇಲ್ಲಿ ನಡೆಯುವ ಬಣ್ಣದ ಹಬ್ಬಕ್ಕೊಂದು ವೈಶಿಷ್ಟ್ಯವಿದೆ. ಬರೀ ಬಣ್ಣ ಎರೆಚುವದಿಲ್ಲ ಇಲ್ಲಿ, ಜೊತೆಯಲ್ಲಿ ಸಂಗೀತ ನೃತ್ಯ, ರಾಸ ಮುಂತಾದೆಲ್ಲ ಒಳಗೊಂಡಿರುವ ಬಣ್ಣದ ಹಬ್ಬ ಇದು. ಇವುಗಳೊಂದಿಗೆ ಸ್ತ್ರೀಪುರುಷರ ಕೋಲಾಟವೂ ನೋಡುವಂತಹದು. ರಸರಾಜ ಭಗವಾನ ಶ್ರೀಕೃಷ್ಣ, ರಸಸಾಮ್ರಾಜ್ಞಿ ರಾಧೆಯ ಸಮಾಗಮವಿಲ್ಲಿರುವದೇ ಈ ಹಬ್ಬಕ್ಕೆ ಅಷ್ಟೊಂದು ಮೆರಗು ! ಈ ರಾಸಕ್ರೀಡೆಯನ್ನೊಡಗೂಡಿದ ಬಣ್ಣದಾಟದ ಜೊತೆಗೆ ಸ್ತ್ರೀಪುರುಷರೂ, ಭಾಂಗ ಸೇವನೆಯನ್ನು ಮಾಡುತ್ತಾರೆ. ಚಿಲುಮೆಯನ್ನು ಎಳೆಯುತ್ತಾರೆ, ಹುಕ್ಕಾ (ಗುಡಗುಡಿ) ಸೇವಿಸುತ್ತಾರೆ, ಇನ್ನೇನು, ಇವುಗಳೆಲ್ಲದರ ಗುಂಗಿನಲ್ಲಿ ಮದ, ಮಸ್ತಕಕ್ಕೇರಿ ವರ್ಣಗಳ ರಂಗೇ ಇಮ್ಮಡಿಸಿದಾಗ ಮಾನವನ ಪ್ರಜ್ಞೆ ಹೇಗಿರಬೇಡ. 'ಬ್ರಜ'ವು ಮಥುರಾದ ಬಳಿಯಿದೆ, ಹಾಗೂ ಕೃಷ್ಯನು ತನ್ನ ಬಾಲ್ಯದ ದಿನಗಳನ್ನು ಇಲ್ಲಿಯೇ ಕಳೆದುದರಿಂದ ಈ ಸ್ಥಳಕ್ಕೆ ಇಷ್ಟೊಂದು ಮಹತ್ವ.

ಕಲಾವಿದನ ಕಣ್ಣಿನಲ್ಲಿ ರಾಸಕ್ರೀಡೆ



ಬರಸಾನಾದಲ್ಲಿ

ಬರಸಾನಾ, ಮಥುರಾ ಬಳಿಯಲ್ಲಿಯೇ ಇರುವ ಇನ್ನೊಂದು ಚಿಕ್ಕ ಹಳ್ಳಿ. ಇದುವೇ ರಾಧೆಯ ಜನ್ಮಸ್ಥಳವೆಂದು ಇಲ್ಲಿಯ ಜನರ ನಂಬುಗೆ ! ಇಲ್ಲಿಯ ಮಹಿಳಾ ಸಮೂಹ ಈ ಹಬ್ಬದ ದಿನ ಹೊರಬಂದು, ಬಹುರೋಷದಿಂದ ಪುರುಷರ ಮೇಲೆ ಬಣ್ಣಚೆಲ್ಲಲು ಬರುತ್ತಾರೆ. ಅದರ ಹಿನ್ನೆಲೆಯೆಂದರೆ ಕೃಷ್ಣನು ಬಾಲ್ಯದಲ್ಲಿ ಇಲ್ಲಿಯ ಮಹಿಳೆಯರನ್ನು ಬಣ್ಣಚೆಲ್ಲುವುದಲ್ಲದೇ ವಿವಿಧ ಕೀಟಲೆ, ಆತಂಕ ಆಟಗಳಿಂದಲೂ



ರಾಜಸ್ಥಾನದಲ್ಲಿ ಕೋಲಾಟ ಸಂಭ್ರಮ

ಕಾಡಿಸಿರುತ್ತಾನೆ, ಪೀಡಿಸಿರುತ್ತಾನೆ. ಆ ಸೇಡನ್ನು ತೀರಿಸುವ ದ್ಯೋತಕವಾಗಿ ಪುರುಷರ ಮೇಲೆ ರೇಗಾಡುತ್ತಾರೆ, ಪುರುಷರು ಆ ಆಹ್ವಾನವನ್ನು ಅಷ್ಟೆ ಆಸಕ್ತಿಯಿಂದ ಸ್ವೀಕರಿಸು ತ್ತಾರೆ. ಈ ಸೇಡಿನ ಬಣ್ಣದಾಟವನ್ನು ನೋಡುವದೇ ಒಂದು ಗೌಜು !


ಹಿಂದಿನ ನೆನಪು

ಇಂದು ಈ ಹಬ್ಬ ತರುಣ ಪೀಳಿಗೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ, ಸಮಾಜದ ಎಲ್ಲಾ ವಯಸ್ಸಿನ ಜನರಲ್ಲಿಯೂ ಹರಡಿ, ಒಂದು ಸಾಮಾಜಿಕ ಐಕ್ಯತೆಯ ಕುರುಹಾಗಿ, ಸ್ನೇಹವರ್ಧನೆಯ ಸಾಧನವಾಗಿ ಬೆಳೆಯುತ್ತಿರುವದು ಸಮಾಧಾನದ ಸಂಗತಿಯೇ.

ಹಿಂದಿನ ಕಾಲದಲ್ಲಿ ಈ ಹಬ್ಬ ಅರಸರ ಕಾಲದಲ್ಲಿ ಒಂದು ಅರಸೊತ್ತಿಗೆಯ ಆಟವಾಗಿರುವದನ್ನು ನೆನೆದರೆ, ಅಥವಾ ಇತಿಹಾಸಕಾರರ ಹಳೆಯ ಟಿಪ್ಪಣಿಗಳನ್ನು ನೋಡಿದರೆ ಇನ್ನೂ ಅಚ್ಚರಿಯಾಗುತ್ತದೆ. ರಾಜಪುತಾನ, ರಾಜಸ್ಥಾನ ಇಂಥ ಉತ್ತರ ಹಿಂದುಸ್ಥಾನದಲ್ಲಿ ಅರಸೊತ್ತಿಗೆ ಮೆರೆದ ನಾಡಿನಲ್ಲಿ ಈ ಹಬ್ಬದ ಅಬ್ಬರ, ಅರಸರ ಕೈಯಲ್ಲಿ ಅದೆಷ್ಟು ಉಬ್ಬಿತ್ತೆಂದರೆ ಉದಯಪುರದಲ್ಲಿ, ಅರಸ ಮನೆತನದ ರಾಜರೂ ರಾಣಿಯರು, ತಮ್ಮ ಪ್ರೀತಿಯ ಕುದುರೆಯ ಸವಾರಿಮಾಡಿ, ಜೊತೆಗೆ ತಮ್ಮ ರಾಜಕೀಯ, ಸೈನಿಕ ಅಧಿಕಾರಿಗಳನ್ನು ಒಡಗೂಡಿ ಅರಮನೆಯ ಎದುರಿನ ನಿವಾಸಗಳ ಮಾಳಿಗೆಗಳ ಮೇಲೆ ಆಡುವ ಈ ನೋಟವೇ ಒಂದು ಸೊಗಸು. ಬಣ್ಣ ಚೆಲ್ಲುವ ರೀತಿಯಲ್ಲೂ ಒಂದು ರೀತಿ, ತೂರುವ ಬಣ್ಣದ ಹುಡಿ, ತೆಳುವಾದ ತಟ್ಟೆಯಲ್ಲಿ ಮಡಿಚಿದ ಅದನ್ನು ಒಗೆದಾಗ ಗುರಿತಲಪಿದ ಅದು ಮದ್ದು ಸಿಡಿದಂತೆ ಸುತ್ತಲೂ ತೂರುತ್ತಿತ್ತು, ಹರಡು ತ್ತಿತ್ತು. ಈ ಆಟದ ವರ್ಣನೆಯನ್ನು ಪ್ರತ್ಯಕ್ಷ ದರ್ಶಿ ''ತೋಡ''ನು Annals & Antiquities of Rajasthan ದಲ್ಲಿ ಬಹು ಅಂದವಾಗಿ ಬರೆದಿದ್ದಾರೆ. ಈ ಹಬ್ಬ ಬರೀ ಬಣ್ಣದಾಟದಲ್ಲಿಯೇ ಮುಕ್ತಾಯವಾಗುತ್ತಿರಲಿಲ್ಲ. 'ದರ್ಬಾರ' ದೊಂದಿಗೆ ಕೊನೆಗೊಳ್ಳುತ್ತಿತ್ತು. ''ಚೌಗನ್'' ದಲ್ಲಿ ಸಭೆಸೇರಿ, ರಾಜರ ಮುಖ್ಯಸ್ಥ 'ರಾಣಾನು' ಒಂದು ಗಂಟೆಯ ಕಾಲ ಹೋಳಿಯ ಹಾಡುಗಳನ್ನು ಆಲಿಸಿ ಆನಂದ ಪಡುತ್ತಿದ್ದನು.

ಮಣಿಪುರದಲ್ಲಿ ಹಬ್ಬದ ರೀತಿ

ಮಣಿಪುರದಲ್ಲಿ ಈ ಹಬ್ಬವನ್ನು ಆಚರಿಸಿದರೂ ಕೂಡ ಇಲ್ಲಿಯ ಆಚರಣೆಯಲ್ಲಿ ಒಂದಿಷ್ಟು ಬದಲಾವಣೆ ಕಂಡುಬರುತ್ತದೆ. ಇಲ್ಲಿಯ ಗಿರಿಜನರು ಈ ಹಬ್ಬ ಕ್ಕೆ 'ಯಾಸುಂಗ' ಎಂದು ಕರೆಯುತ್ತಾರೆ. ಅದಕ್ಕೇ ನೇರವಾಗಿ ಹೋಳಿಹಬ್ಬವೆನ್ನುವುದಿಲ್ಲ. ಹೋಳಿಯ ಹತ್ತಿರದ ಸಹೋ ದರನೇ 'ಯಾಸುಂಗ' ಎಂಬುವದು ಇವರ ನಂಬುಗೆ. ಭಾರತದ ನೆಲಮೇಲೆ, ಶೈವ ತಳಹದಿಯ ಮೇಲೆ ಈ ಹಬ್ಬ ವನ್ನು ಆಚರಿಸಿದರೆ ಇಲ್ಲಿಯವರದು ಹೆಚ್ಚಾಗಿ ವೈಷ್ಣವ ಸಂಪ್ರದಾಯ ದಲ್ಲಿ ನಡೆಯುವ ಹಬ್ಬ. ಅದು ಕೃಷ್ಣನ



ಮಹಾಭಕ್ತ ಚೈತನ್ಯ ಪ್ರಭುವಿನ ಜನ್ಮದಿನವೆಂದು ಅವರ ನಂಬುಗೆ.

ಮಣಿಪುರಿಯ ಜನರು ಹಿಂದಿನಿಂದ ಬಂದು ಒಂದು ನಂಬುಗೆಯನುಸಾರ, ಚೈತನ್ಯ ಮಹಾಪ್ರಭು ಪುರಿಯ ಜಗನ್ನಾಥನ ಪಾದದಲ್ಲಿಯೇ ಲೀನವಾದನೆಂಬುದಂ, ಇನ್ನೊಂದು ನಂಬುಗೆಯ ಪ್ರಕಾರ ಕೃಷ್ಣ ಪರಮಾತ್ಮನು ಸಮುದ್ರದಲ್ಲಿ ನಡೆದು ಹೋದನೆಂದೂ ಹೇಳುತ್ತಾರೆ. ಅಂತೂ ಮಣಿಪುರದಲ್ಲೂ 'ಯಾಸುಂಗ' ಹೆಸರಿನಲ್ಲಿ ಬಣ್ಣದ ಹಬ್ಬ ನಡೆ ಯುತ್ತದೆ.

ಯುಗಾದಿ 'ವಾಸಂತಿ'

ಬಣ್ಣದ ಆಟವಾಗಿ ಎಲ್ಲೆಲ್ಲೂ ವರ್ಣಮಯವಾದ ವಾತಾವರಣವನ್ನು ನಿರ್ಮಿಸಿ, ಹೊಸವರ್ಷ ಸ್ವಾಗತ ಬಯಸುತ್ತೇವೆ, ಇಲ್ಲವೇ ಮನ್ಮಥ ರತಿಯು ಹೊರಡುವಾಗ ವಾಸಂತಿಯನ್ನು - ಯುಗಾದಿಯನ್ನು ನಮಗಾಗಿ ಕಳುಹುತ್ತಾರೆ.

ಆ ಸಂಭ್ರಮವೇ ಬೇರೆ, ಯುಗಾದಿ ಬಂತೆಂದರೆ ಹೊಲ ಉಳುವ ರೈತನ ಮನೆಯ ಸಂಭ್ರಮ ಬೇರೆ, ಅಂದು ಆತ ನೇಗಿಲ ಪೂಜೆಯನ್ನು ಮನೆಯವರೊಂದಿಗೆ ವಿಶೇಷವಾಗಿ ನೆರವೇರಿಸುತ್ತಾನೆ.

ನಮ್ಮಲ್ಲಿ 9ರ ಅಂಕಿಗೆ ಒಂದು ವಿಶಿಷ್ಟ ಪ್ರತಿಷ್ಠೆ. ನವಗ್ರಹ, ನವರತ್ನ, ನವರಸ ಹೀಗೆ ಇನ್ನು ಏನೇನೋ ವಿಷಯಗಳಲ್ಲೂ ಈ ಸಂಖ್ಯೆಯ ಮಹತ್ತ್ವವನ್ನು ಹೆಚ್ಚಿಸಿದ್ದಾರೆ, ನೇಗಿಲು ಪೂಜೆಯ ಕಾಲಕ್ಕೆ ನವಧಾನ್ಯವಿರಬೇಕು, ಅಡಕೆಹಾಳೆಯ ದೊನ್ನೆ ಇಲ್ಲವೆ ರೇಶಿಮೆ ಬಟ್ಟೆಯಲ್ಲಿ ಆ ನವಧಾನ್ಯಗಳನ್ನು ಕಟ್ಟಿ ನೇಗಿಲದ ಜೊತೆಗೆ ಪೂಜೆಯಲ್ಲಿರಿಸಬೇಕು. ಹೀಗೆ ಇರಿಸಿದ ಧಾನ್ಯಗಳ ಮೇಲೆ ದಿನ ಪೂಜೆ ಮಾಡಿದಾಗ ಈ ಧಾನ್ಯದ ಗಂಟಿನಮೇಲೂ ನೀರು ಚಿಮುಕಿಸುತ್ತಾರೆ. ಒಂಬತ್ತು ದಿನಗಳ ಕಾಲ ಈ ಪೂಜೆ, ಆಮೇಲೆ ಗಂಟನ್ನು ಬಿಚ್ಚಿ ಯಾವ ಧಾನ್ಯದ ಮೊಳಕೆ ಹೆಚ್ಚು ಬಂದಿದೆ ಎಂಬುದನ್ನು ನೋಡಿ, ಆ ಧಾನ್ಯದ ಫಸಲು ಹೆಚ್ಚು ಬರುತ್ತದೆಂಬುದನ್ನು ನಿರ್ಣಯಿಸುತ್ತಾರೆ. ಈ ಪೂಜೆಗೆ 'ಹೊನ್ನೇರು' ಎಂದೂ ಕರೆಯುವದುಂಟು, ಆದರೆ ಪ್ರಾದೇಶಿಕವಾಗಿ ಈ ಹಬ್ಬದ ರೂಢಿ ಈಗ ಅಲ್ಲಲ್ಲಿ ಕಡಿಮೆಯಾಗಿದೆ.

ಹಣ್ಣೆಲೆ ಉದುರಿ, ಚಿಗುರೆಲೆ ಹಚ್ಚಹಸಿರಾಗಿ ವೃಕ್ಷದ ಎಲ್ಲ ಭಾಗವನ್ನೂ ಆವರಿಸಿರುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತಾರೆ – ಹಣ್ಣೆಲೆ ಉದುರುವಾಗ ಹಸುರೆಲೆ ನಕ್ಕಿತು – ಎಂದು, ಆದರೆ ಆ ಹಸಿರೆಲೆ, ತಾನೂ ಹಣ್ಣಾಗಿ ಒಂದು ದಿನ ಉದುರುವದೇ ಎಂಬುದನ್ನು ಗಮನದಲ್ಲಿಟ್ಟಿರುವುದಿಲ್ಲವೆಂಬ ಮಾತನ್ನು ಈ ನುಡಿ ನೆನಪಿಗೆ ತಂದು ಕೊಡುತ್ತದೆ, ಇದು ಯುವಕರಿಗೆ ಎಚ್ಚರದ ಮಾತು !

ಈ ವಸಂತಋತುವಿನ ಕಾಲದಲ್ಲಿ ನಿಸರ್ಗ ಒಂದು ರೀತಿಯ ಕೊಡುಗೆಯನ್ನು ನೀಡಿದರೆ, ಹಬ್ಬವನ್ನು ಆಚರಿಸುವ ರೀತಿಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಬೇವು-ಬೆಲ್ಲವನ್ನು ಸಾಧಾರಣ ಎಲ್ಲೆಡೆ ಉಪಯೋಗಿಸುವದುಂಟು. ಮಹಾರಾಷ್ಟ್ರದಲ್ಲಿ ಈ ಹಬ್ಬಕ್ಕೆ ''ಗುಡಿಪಾಡವಾ'' ಎಂದು ಕರೆಯುತ್ತಾರೆ. ಅಂದು ಪ್ರತಿಯೊಬ್ಬರ ಮನೆಯ ಮೇಲೆ, ಧ್ವಜದ ಆಕಾರದ ಒಂದು ಕೋಲಿಗೆ ಹೊಸಬಟ್ಟೆಯನ್ನು ಇರಿಸಿ ಅದರ ಮೇಲೊಂದು ಚಿಕ್ಕ ತಂಬಿಗೆಯೋ ಅಥವಾ ಗಿಂಡಿಯನ್ನೋ ಸೇರಿಸಿರುತ್ತಾರೆ. ಅದು 'ಧ್ವಜದ' ರೀತಿಯಲ್ಲಿ ಕಾಣುತ್ತದೆ. ಕನ್ನಡದಲ್ಲಿ



ಬ್ರಜ್ ಮಹಿಳೆಯರು ಹಬ್ಬದ ಸಡಗರದಲ್ಲಿ

ಧ್ವಜಕ್ಕೆ 'ಗುಡಿ'ಯಂದೂ ಕರೆಯುತ್ತೇವೆ. ಈ ಅಚ್ಚಕನ್ನಡ ಶಬ್ದ "ಗುಡಿ" ಮರಾಠಿಯಲ್ಲಿ ಮಿಶ್ರವಾಗಿ ಮರಾಠಿಯದೇ ಎಂಬುವಷ್ಟರ ಮಟ್ಟಿಗೆ ಬಳಕೆಯಲ್ಲಿದೆ.

ಕರ್ನಾಟಕದಲ್ಲಿ ಯುಗಾದಿಯಂದು 'ಹೋಳಿಗೆ'ಯೇ ಪಕ್ವಾನ್ನವಾದರೆ ಅದೇ ಹೋಳಿಗೆ ಮಹಾರಾಷ್ಟ್ರದಲ್ಲಿ 'ಹೋಳಿ' ಯಂದು ಪಕ್ವಾನ್ನ. 'ಹೋಳಿರೇ, ಹೋಳಿ, ಪೂರ್ಣಾಚಿ ಪೋಳಿ... ಎಂದು ಮಕ್ಕಳು ಹಾಡಿ, ಹೋಳಿಗೆಯನ್ನು ಆಹ್ವಾನಿಸುತ್ತಾರೆ. "ಹೂರಣಕ್ಕೆ 'ಪೂರಣ' ಎಂದು ಕರೆಯುವದುಂಟು ಮರಾಠಿಗಳು.

ಯುಗಾದಿಯಂದು ಪಂಚಾಂಗ ಶ್ರವಣ ವೂ ನಡೆಯಬೇಕು. ಅದರಿಂದ ವರ್ಷದ ಆಗುಹೋಗು ಮಳೆಬೆಳೆ ದೇಶದ ಸ್ಥಿತಿಗತಿ ಮುಂತಾದ್ದನ್ನೆಲ್ಲ ಊರಜೋಯಿಸರು ಹೇಳಬೇಕು, ಈಗ ಈ ಪದ್ಧತಿ ಸಾಕಷ್ಟು ಕಡಿಮೆಯಾಗಿದೆ. ತೂಗು ಪಂಚಾಂಗ ಬಂದಾಗಿನಿಂದ ಪ್ರತಿಯೋರ್ವರು ಅದನ್ನು ತಾವೇ ಓದಿ ತಿಳಿದುಕೊಳ್ಳುವಷ್ಟು ಸುಲಭವಾಗಿದೆ ಆ ತೂಗು ಪಂಚಾಂಗ .

ಯುಗಾದಿಯಂದು ಅಲ್ಪವಾದರೂ ಚಿನ್ನವನ್ನು ಕೊಳ್ಳಬೇಕು. ಅದು ಸಮೃದ್ಧಿಯ ಕುರುಹು. ಆದರೆ ಈಗ ಕೊಳ್ಳುವ ಚಿನ್ನದ ಪ್ರಮಾಣ ಕಡಿಮೆಯಾಗಿದೆ. 'ಶಾಸ್ತ್ರ'ವಾಗಿ ಉಳಿದಿದೆಯಷ್ಟೆ ! ಅಂತೂ ಹೊಸವರ್ಷದಂದೂ ಒಂದಿಷ್ಟು ಚಿನ್ನ ಮನೆಗೆ ಬರಬೇಕು.

ಹೀಗೆ ಕಸವೂ ರಸವಾಗಿ ಕಣ್ಣಿಗೆ ಹಬ್ಬವನ್ನಾಗಿ ಮಾಡುವ ಈ ವಸಂತಋತುವಿನ ವರ್ಣನೆಯನ್ನು ಎಷ್ಟು ಮಾಡಿದರೂ ಕಡಿಮೆಯೇ ! ●

ಋತುಗಾನ

ವಸಂತನ ಹಸಿರು ಚಿಗುರು
ಗ್ರೀಷ್ಮನ ಬಿಸಿ ತಪನೆ
ವರ್ಷನ ಧಾರೆಯಲ್ಲಿ ಕರಗಿ
ಮಿಲನದ ಸಂಭ್ರಮ
ಶರತ್ ಹೇಮಂತಗಳ
ಸುಗ್ಗಿ ಸಂಕ್ರಾಂತಿಯಲೂ
ಮೆರೆವ ಛಳಿ, ಮರೆಸುವ
ವಸಂತನ ನಿರೀಕ್ಷೆ,
ಇದ್ದರೆಷ್ಟು ಚಂದ,
ಒಂದೇ ಋತು,
ಎಲ್ಲ ಸದ್ಗುಣಗಳ ಹೊತ್ತು ?!

● ಕೆ. ವಿ. ರಾಜಲಕ್ಷ್ಮಿ, ಮಂಡ್ಯ